# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರವನ್ನು ಸಲ್ಲಿಸುವ ಕುರಿತು.

**ಪ್ರಶ್ನೆ :**

ಸಹಸ್ರಾರು ವರ್ಷಗಳ ಇತಿಹಾಸವಿರುವ ಅಗತ್ಯರ ಪ್ರಭಾವದ ಕುರಿತು ವಾಲ್ಮೀಕಿ ರಾಮಾಯಣದಲ್ಲಿಯೂ ಉಲ್ಲೇಖವಿದೆ, ಅಗಸ್ತರ ಕಮಂಡಲದಿಂದಲೇ ತಮಿಳುನಾಡಿನ ಕಾವೇರಿ ಪಟ್ಟಣಂ ತನಕ ಅನೇಕ ಶಿವಲಿಂಗಗಳನ್ನು ಸ್ಥಾಪಿಸಿದ್ದಾರೆ ಅದೇ ರೀತಿ ಕೊಡಗಿನ ತಲಕಾವೇರಿಯಲ್ಲಿ ಸ್ಥಾಪಿಸಲ್ಪಟ್ಟ ಶಿವಲಿಂಗವನ್ನು ಅಗಸ್ತೇಶ್ವರ ಲಿಂಗವೆಂದು ಪರಿಗಣಿಸಲಾಗಿದೆ. ಇತ್ತೀಚೆಗೆ ಆಗಸ್ತೇಶ್ವರ ಲಿಂಗ ವಿವಾದವು ಮುನ್ನಲೆಗೆ ಬಂದಿದ್ದು ಇದರ ವರದಿಯು ರಿಪಬ್ಲಿಕ್ ಕನ್ನಡ ಸುದ್ದಿ ಮಾಧ್ಯಮ ಹಾಗೂ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಲಿಂಗವನ್ನು ವಿಸರ್ಜಿಸುವ ಕಾರ್ಯವು ನಡೆಯುವ ಸಂದರ್ಭದಲ್ಲಿ ಪರವಿರೋಧ ಚರ್ಚೆಯಾಗಿ ನ್ಯಾಯಾಲಯದಲ್ಲಿ ವಿಸರ್ಜನೆ ಮಾಡುವುದನ್ನು ತಡೆಯೊಡ್ಡಿ, ತಡೆಯಾಜ್ಞೆ ಪಡೆಯಲಾಗಿದೆ. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಗಳು ಪ್ರತಿ ವರ್ಷ ಹೆಚ್ಚಾಗುತ್ತಲೆ ಇದ್ದು ಇದಕ್ಕೆ ಅಗಸ್ತ್ಯ ಲಿಂಗೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಪ್ರಕ್ರಿಯೆಯನ್ನು ಕೈಗೊಳ್ಳದೆ ಇರುವುದು ಒಂದು ಕಾರಣವೆಂದು ಸ್ಥಳೀಯರಲ್ಲಿ ಅಭಿಪ್ರಾಯ ಮೂಡಿದೆ. ಆಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ತಲಕಾವೇರಿಯ ಜೀರ್ಣೋದ್ಧಾರಕ್ಕೆ ಪಣತೊಟ್ಟು ಅನುದಾನವನ್ನು ಸಹ ಬಿಡುಗಡೆ ಮಾಡಲಾಗಿತ್ತು.

ಆ ಸಂದರ್ಭದಲ್ಲಿ ಆಗಸ್ತೇಶ್ವರ ಲಿಂಗವನ್ನು ಹೂತು ಅದರ ಮೇಲೆ ಹೊಸ ಲಿಂಗವನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು ಇದಕ್ಕೆ ಹಲವು ಸ್ಥಳೀಯರ ವಿರೋಧ ವ್ಯಕ್ತವಾಗಿತ್ತು. ನಂತರದಲ್ಲಿ 2019 ರಲ್ಲಿ ಹೂತಿಟ್ಟ ಲಿಂಗವನ್ನು ಮೇಲಕ್ಕೆತ್ತಿ ವಿಸರ್ಜನೆ ಮಾಡಲು ನಿರ್ಧರಿಸಿದ ಸಂದರ್ಭದಲ್ಲಿ ಹಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿರುತ್ತಾರೆ ನಂತರದಲ್ಲಿ ಹಳೆ ಲಿಂಗವನ್ನು ತೆಗೆದು ಕೊಠಡಿಯಲ್ಲಿ ಇರಿಸಲಾಗಿದೆ. ಈ ಪ್ರಕ್ರಿಯೆ ಕೈಗೊಂಡು ಐದಾರು ವರ್ಷಗಳು ಕಳೆದರೂ ಸ್ಥಳೀಯರಲ್ಲಿರುವ ಭಿನ್ನಾಭಿಪ್ರಾಯಗಳಿಂದಾಗಿ ಹಾಗೂ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಅಗಸ್ತೇಶ್ವರ ಲಿಂಗವು ಕೊಠಡಿಯಲ್ಲಿ ಯಾವುದೇ ಪೂಜೆ ಪುರಸ್ಕಾರಗಳಿಲ್ಲದೇ ಅನಾಥವಾಗಿ ಕೂತಿದೆ. ಸ್ಥಳೀಯರ ನಂಬಿಕೆಯಂತೆ ಪ್ರಕೃತಿ ವಿಕೋಪಗಳು ಇನ್ನಿತರ ಅಹಿತಗರ ಘಟನೆಗಳು ಈ ಭಾಗದಲ್ಲಿ ನಿರಂತರವಾಗಿ ನಡೆಯುತ್ತಲೇ ಇದೆ ಹಾಗೂ ಇನ್ನು ಮುಂದೆಯು ಇಂತಹ ಅಹಿತಕರ ಆತಂಕ ಸ್ಥಳಿಯರಲ್ಲಿ ಮನೆ ಮಾಡಿದೆ. ನ್ಯಾಯಾಲಯದ ಘಟನೆಗಳು ನಡೆಯುತ್ತವೆ ಎಂಬ ತಡೆಯಾಜ್ಞೆಯನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆಯು ಸಮರ್ಪಕವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಅಭಿಪ್ರಾಯವು ಇದೆ.

ಆದ ಕಾರಣ ಕೂಡಲೇ ಸರ್ಕಾರವು ಮಧ್ಯಪ್ರವೇಶಿಸಿ ಸಾವಿರಾರು ವರ್ಷಗಳ ಇತಿಹಾಸವಿರುವ ನ್ಯಾಯಾಲಯದ ತಡೆಯಾಜ್ಞೆಯನ್ನು ಅಗಸ್ತ್ಯಲಿಂಗೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಸಲುವಾಗಿ ತೆರವುಗೊಳಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡು ಹಾಗೂ ಸ್ಥಳೀಯರೊಂದಿಗೆ ಇದರ ಸಾಧಕ ಭಾದಕಗಳ ಕುರಿತು ಚರ್ಚಿಸಿ ಅಗಲಿಂಗೇಶ್ವರ ಲಿಂಗಕ್ಕೆ ಮುಕ್ತಿ ನೀಡುವಂತೆ ಮಾನ್ಯ ಮುಜರಾಯಿ ಸಚಿವರ ಹಾಗೂ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಉತ್ತರ :-**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ಪುರಾತನ ಶಿವಲಿಂಗವು ಪ್ರತಿಷ್ಠಾಪನೆಯಾಗಿದ್ದು, ಸದರಿ ಶಿವಲಿಂಗವನ್ನು "ಅಗಸ್ತ್ಯೇಶ್ವರ ಲಿಂಗ" ಎಂದು ಕರೆಯಲ್ಪಡುತ್ತಿದೆ. ಸದರಿ ಲಿಂಗವನ್ನು ಅಗಸ್ತ್ಯ ಮಹರ್ಷಿ ಮುನಿಗಳು ತಮ್ಮ ಜೀವಿತಾವಧಿಯಲ್ಲಿ ಪ್ರತಿಷ್ಠಾಪಿಸಿರುವುದಾಗಿ ತಿಳಿದು ಬಂದಿದೆ. ನಂತರ ಲೋಕಾರೂಢಿಯಾಗಿ ಅಗಸ್ತ್ಯೇಶ್ವರ ಲಿಂಗ ಎಂದು ನಾಮಕರಣ ಹೊಂದಿರುತ್ತದೆ.

ತಲಕಾವೇರಿ ಕಾವೇರಿ ಮಾತೆಯ ಪವಿತ್ರ ಉಗಮ ಸ್ಥಳವಾಗಿದೆ. ಸದರಿ ಸ್ಥಳದಲ್ಲಿ ಪ್ರತಿಷ್ಠಾನಿಸಲ್ಪಟ್ಟಿರುವ ಅಗಸ್ತ್ಯೇಶ್ವರ ಲಿಂಗವು ಹಾಳಾಗಿರುವುದರಿಂದ ಸದರಿ ವಿಗ್ರಹವನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ ಎಂದು 1992 ರಲ್ಲಿ ವ್ಯವಸ್ಥಾಪನಾ ಸಮಿತಿಯವರು ಹಾಳಾದ ಹಳೆಯ ವಿಗ್ರವನ್ನು ಹೊರತೆಗೆದು ಅದರ ಬದಲಾಗಿ ಹೊಸ ಲಿಂಗವನ್ನು ಪ್ರತಿಷ್ಠಾಪಿಸಬೇಕೆಂದು

ತೀರ್ಮಾನಿಸಿ, ಸದರಿ ಹಾಳಾದ ಲಿಂಗವನ್ನು ಮೂಲ ಸ್ಥಳದಿಂದ ತೆಗೆದು ಬೇರೆ ಕಡೆ ಇರಿಸಲಾಗಿದೆ. ಇದರಿಂದಾಗಿ ಸದರಿ ಲಿಂಗವು ಮುರಿದು ಹಾಳಾಗಿದ್ದು, ಇದು ಮುಜರಾಯಿ ಇಲಾಖೆಯ ನಿರ್ಲಕ್ಷವೆಂದು ಪ್ರಸ್ತಾಪಿಸಿರುತ್ತಾರೆ. ಸದರಿ ವಿಗ್ರಹವನ್ನು ಮೂಲ ಸ್ಥಳದಿಂದ ತೆಗೆಯುವಾಗ ಇಲಾಖೆಯಿಂದ ಯಾವುದೇ ಅಪ್ಪಣೆಯನ್ನು ಪಡೆದಿರುವುದಿಲ್ಲವೆಂದು ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುವುದಿಲ್ಲವೆಂದೂ, ನಂತರ ವ್ಯವಸ್ಥಾಪನಾ ಸಮಿತಿಯ ಅಧಿಕಾರ ದುರುಪಯೋಗ ಹಾಗೂ ಇಲಾಖೆಯ ನಿರ್ಲಕ್ಷದಿಂದಾಗಿ ದಿನಾಂಕ:26-12-2004 ರಂದು ಸದರಿ ವಿಗ್ರಹವನ್ನು ಸ್ಥಳದಿಂದ ತೆಗೆದಿರುವುದಾಗಿ ರಿಟ್ ಅರ್ಜಿದಾರರು ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಿರುತ್ತಾರೆ.

ವಿಗ್ರಹವನ್ನು ಮೂಲ ಸ್ಥಳದಿಂದ ಬೇರ್ಪಡಿಸುವಾಗ ಅನೇಕ ಪ್ರಕೃತಿ ವಿಕೋಪಗಳು ಉಂಟಾಗಿದ್ದು, ಹಾಲಿ ಋಷಿ ಮುನಿಗಳು ಪ್ರತಿಷ್ಠಾಪಿಸಿರುವ ಅಗಸ್ತೇಶ್ವರ ಲಿಂಗವು ವಿಶೇಷ ಪೂಜ್ಯ ಭಾವನೆ ಮತ್ತು ಋಷಿಗಳು ಪ್ರತಿಷ್ಠಾಪಿಸಿರುವ ಆತ್ಮಲಿಂಗವಾಗಿರುವುದರಿಂದ ಲಿಂಗವನ್ನು ಸಾಂಪ್ರದಾಯಿಕವಾಗಿ ಅಲ್ಲಿಯೇ ಉಳಿಸಿಕೊಳ್ಳುವುದು ಸೂಕ್ತವೆಂದು ಪ್ರಸ್ತಾಪಿಸಿರುತ್ತಾರೆ. ಇದೇ ವಿಚಾರವಾಗಿ ಈಗಲೂ ಸಹ ಗೋಕರ್ಣ ಹಾಗೂ ಮುರುಡೇಶ್ವರ ದೇವಾಲಯಗಳಲ್ಲಿ ಚೂರು ಚೂರಾದ ವಿಗ್ರಹಗಳನ್ನು ಸಾಂಪ್ರದಾಯಿಕವಾಗಿ ಪೂಜಿಸಿಕೊಂಡು ಬರಲಾಗುತ್ತಿದೆಂದು ತಿಳಿಸಿರುತ್ತಾರೆ. ಈ ಬಗ್ಗೆ 1992ರಲ್ಲಿ ಅಷ್ಟಮಂಗಲ ವ್ಯವಸ್ಥೆಯಾಗಿರುವುದಾಗಿ ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಿರುತ್ತಾರೆ.

ಈ ಕುರಿತು ಸಂಬಂಧಿಸಿದ ಇಲಾಖೆ ಹಾಗೂ ಪ್ರಾಧಿಕಾರದ 8 ಮತ್ತು 9ನೇ ಪ್ರತಿವಾದಿ ಸಮಿತಿಯವರು ಕೂಡಲೇ ಲಿಂಗವನ್ನು ಮೂಲಸ್ಥಳದಲ್ಲಿ ಪ್ರತಿಷ್ಠಾಪಿಸುವಂತೆ ರಿಟ್ ಅರ್ಜಿದಾರರು ಹಾಗೂ ಅವರ ಅನುಯಾಯಿಗಳು ನ್ಯಾಯಾಲಯವನ್ನು ಕೋರಿರುತ್ತಾರೆ.

ಪ್ರಕರಣದ 8 ಮತ್ತು 9ನೇ ಪ್ರತಿವಾದಿಯವರು ಮೂಲ ಸ್ಥಳದಿಂದ ತೆಗೆದಿರುವ ಅಗಸ್ತೇಶ್ವರ ಲಿಂಗವನ್ನು ಬಂಗಾಳ ಸಮುದ್ರದಲ್ಲಿ ಮುಳುಗಿಸುವುದಾಗಿ ತೆಗೆದುಕೊಂಡ ತೀರ್ಮಾನವು ಶಾಸ್ತ್ರ ಸಂಪ್ರಧಾಯಕ್ಕೆ ವಿರುದ್ಧವಾಗಿದ್ದು, ಭಕ್ತರ ಭಾವನೆಗಳಿಗೆ, ನಂಭಿಕೆಗಳಿಗೆ ಮತ್ತು ಅಗಸ್ತೇಶ್ವರ ಲಿಂಗವನ್ನು ಪೂಜಿಸದಿದ್ದರೆ ಭಕ್ತಾದಿಗಳಿಗೆ ನೋವುಂಟು ಮಾಡಿದಂತಾಗುತ್ತದೆಂದೂ, ಆದುದರಿಂದ ಸದರಿ ವಿಗ್ರಹವನ್ನು ಬಂಗಾಳ ಸಮುದ್ರದಲ್ಲಿ ಮುಳುಗಿಸಬಾರದೆಂದೂ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದುದರಿಂದ ಅಗಸ್ತೇಶ್ವರ ಲಿಂಗವನ್ನು ಮೂಲ ಸ್ಥಳದಲ್ಲಿಯೇ ಪ್ರತಿಷ್ಠಾಪಿಸುವಂತೆ, ಸದರಿ ಲಿಂಗವನ್ನು ನಾಶ ಮಾಡದೇ ಬಂಗಾಳ ಸಮುದ್ರದಲ್ಲಿ ಮುಳುಗಿಸದಂತೆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗುವಂತೆ ನಿರ್ದೇಶನ ನೀಡುವಂತೆ ಕೋರಿ ರಿಟ್ ಅರ್ಜಿದಾರರಾದ ಶ್ರೀ ಲೋಹಿತ್ ಅರಸ್ ರವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 15763/2019 ಅನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 62 ಮುಆಪ್ರ 2019, ದಿನಾಂಕ: 20-05-2019ರಲ್ಲಿ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಮಡಿಕೇರಿ ರವರು ವ್ಯಾಜ್ಯ ನಿರ್ವಹಣಾಧಿಕಾರಿಯಾಗಿರುತ್ತಾರೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಪ್ರ.ಇ. 242. ಕೆ.ಎಂ. ಯು 2019, ದಿನಾಂಕ:24-07-2019ರ ಆದೇಶದಲ್ಲಿ ಸಹಾಯಕ ನಿರ್ದೇಶಕರು, ಪ್ರಾಚ್ಯ ವಸ್ತು ಸಂಗ್ರಾಲಯ ಇಲಾಖೆ, ಬೆಂಗಳೂರುರವರು ವ್ಯಾಜ್ಯ ನಿರ್ವಹಣಾಧಿಕಾರಿಯಾಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:24-09-2020ರಲ್ಲಿ ಸಹಾಯಕ ನಿರ್ದೇಶಕರು, ಪ್ರಾಚ್ಯ ವಸ್ತು ಸಂಗ್ರಾಲಯ ಇಲಾಖೆ, ಬೆಂಗಳೂರು ರವರು ಲಿಖಿತ ಆಕ್ಷೇಪಣೆಯನ್ನು ಅಫಿಡಾವೀಟ್ ಮುಖಾಂತರ ನ್ಯಾಯಾಲಯಕ್ಕೆ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಏತನ್ಮಧ್ಯೆ ದಿನಾಂಕ:16.01.2002ರಂದು ದೇವಾಲಯದ ವತಿಯಿಂದ ನಡೆಸಿದ ಅಷ್ಟಮಂಗಲ ಪ್ರಶ್ನೆ ಸಂದರ್ಭ ಜ್ಯೋತಿಷಿಗಳು ಹೇಳಿದಂತೆ ಶ್ರೀ ಅಗಸ್ತೇಶ್ವರನ ಬಿಂಬವು ಅತ್ಯಂತ ಜೀರ್ಣವಾಗಿದ್ದು, ಇದು ಅಷ್ಟಬಂಧ ಚಲನೆಯಾಗಿ ಆಗಾಗ್ಗೆ ಪತನಗೊಳ್ಳುವುದರಿಂದ, ಹೊಸ ಬಿಂಬವನ್ನು ಪ್ರತಿಷ್ಠಾಪಿಸುವುದು ಸೂಕ್ತವೆಂದು ಹಾಗೂ ಹೊಸ ಬಿಂಬ ಸ್ಥಾಪನೆಯ ಸಂದರ್ಭದಲ್ಲಿ ಜೀರ್ಣವಾದ ಶ್ರೀ ಅಗಸ್ತೇಶ್ವರ ಹಳೆ ಬಿಂಬವನ್ನು (ಶಿವಲಿಂಗವನ್ನು) ನಿಸ್ತೇಜಗೊಳಿಸಿ, ಅದರಡಿಯಲ್ಲಿ ಭೂಗತ ಮಾಡಬೇಕೆಂದು ತಿಳಿಸಿರುತ್ತಾರೆ. ಅದರಂತೆ ಸದರಿ ಶಿವಲಿಂಗವನ್ನು ಭೂಗತಗೊಳಿಸಿರುತ್ತಾರೆ.

ನಂತರ ದಿನಾಂಕ: 21.05.2018 ರಂದು ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಈಗಾಗಲೇ ಭೂಗತಗೊಳಿಸಿರುವ ಹಳೆಯ ಶ್ರೀ ಅಗಸ್ತೇಶ್ವರ ಬಿಂಬವನ್ನು ನಿಸ್ತೇಜಗೊಳಿಸುವಂತೆ ಹಾಗೂ ಸದರಿ ವಿಗ್ರಹವನ್ನು "ಪೂಂಪಹಾರ್" ಎಂಬ ಕಾವೇರಿ ನದಿ ಸಮುದ್ರ ಸೇರುವ ಸ್ಥಳದಲ್ಲಿ ವಿಸರ್ಜನೆ ಮಾಡಬೇಕೆಂದೂ ಹಾಗೂ ಅಡಿ ಭಾಗದಲ್ಲಿರುವ ಇಟ್ಟಿರುವ ಹಳೇ ಬಿಂಬ (ಶಿವಲಿಂಗ)ವು ತಂತ್ರಿಗಳಿಗೆ

ವಿಘ್ನ ಉಂಟಾಗಿದೆ ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಶಿವಲಿಂಗವನ್ನು ಹೊರತೆಗೆದು, ಬಂಗಾಳ ಸಮುದ್ರದಲ್ಲಿ ವಿಸರ್ಜಿಸುವ ಸಲುವಾಗಿ ದೇವಾಲಯದಲ್ಲಿಯೇ ಸುರಕ್ಷಿತವಾಗಿ ಇರಿಸಲಾಗಿದೆ.

ಏತನ್ಮಧ್ಯೆ ಶ್ರೀ ಲೋಹಿತ್ ಅರಸ್ ಇವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 15763/2019 ಅನ್ನು ದಾಖಲಿಸಿ, ವಿಘ್ನಗೊಂಡ ಶ್ರೀ ಅಗಸ್ತೇಶ್ವರ ಲಿಂಗವನ್ನು ಬಂಗಾಳ ಸಮುದ್ರದಲ್ಲಿ ಮುಳುಗಿಸದಂತೆ ಹಾಗೂ ಸದರಿ ಶಿವಲಿಂಗವನ್ನು ಅಲ್ಲಿಯೇ ಪುನರ್ ಸ್ಥಾಪಿಸುವಂತೆ 1 ರಿಂದ 5 ನೇ ಪ್ರತಿವಾದಿಯವರು (1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌದ ಬೆಂಗಳೂರು, 2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಬೆಂಗಳೂರು, 3. ಪ್ರಾದೇಶಿಕ ನಿರ್ದೇಶಕರು, ದಕ್ಷಿಣ ವಲಯ, ಪ್ರಾಚ್ಯವಸ್ತು ಇಲಾಖೆ, ಬೆಂಗಳೂರು, 4. ಆಯುಕ್ತರು, ಪ್ರಾಚ್ಯವಸ್ತು ಇಲಾಖೆ, ಮೈಸೂರು ಮತ್ತು 5. ನಿರ್ದೇಶಕರು, ಪ್ರಾಚ್ಯವಸ್ತು ಇಲಾಖೆ, ಪಾರಂಪರಿಕ ವಸ್ತು ಸಂಗ್ರಹಾಲಯ, ಬೆಂಗಳೂರು) ಹಾಗೂ 8 (ಶ್ರೀ ತಮ್ಮಯ್ಯ) ಮತ್ತು 9 (ದಿವಂಗತ ನಾರಾಯಣಚಾರ್) ನೇ ಪ್ರತಿವಾದಿಯವರಿಗೆ ನಿರ್ದೇಶನ ನೀಡುವಂತೆ ರಿಟ್ ಅರ್ಜಿದಾರರು ರಿಟ್ ಅರ್ಜಿಯಲ್ಲಿ ಕೋರಿರುತ್ತಾರೆ.

ನಂತರ ಮಾನ್ಯ ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ದಿನಾಂಕ:10.04.2019 ರಂದು ಕೈಗೆತ್ತಿಕೊಂಡು, ಈ ಕೆಳಕಂಡಂತೆ ಮಧ್ಯಂತರ ಆದೇಶವನ್ನು ನೀಡಿದೆ. :-

*"Pending issue of Rule nisi in the aforesaid Writ Petition it is hereby ordered by this Court on Wednesday THE 10th DAY OF April 2019"*

*__Note:-__ As on interim relief, it is prayed to pass necessary orders and issue directions to respondents 1 to 5 and 8 and 9 not to remove the Agashtyeshwara Linga from Agashtyeshwara temple at Talacauvery, Madikeri Taluk, Coorg District and not to immense the same in the Sea of Bengal or in any other place and not to destroy the Agashtyeshwara Linga in any manner.*

ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದಿಂದಾಗಿ ಪ್ರಸ್ತುತ ಯಾವುದೇ ಕ್ರಮವನ್ನು ವಹಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಹಳೇ ಶಿವಲಿಂಗವನ್ನು ಪುನರ್ ಸ್ಥಾಪಿಸುವ ವಿಚಾರದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದಂತೆ ಕ್ರಮವಹಿಸುವುದು ಸೂಕ್ತವಾಗಿರುತ್ತದೆ.

**__ಅಂತಿಮವಾಗಿ:-__**

ಮೇಲ್ಕಂಡಂತೆ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶವನ್ನು ಕಾಯ್ದೆಯ ನಿಯಮಾನುಸಾರ ತೆರವುಗೊಳಿಸಲು ಕ್ರಮವಹಿಸಬೇಕಾಗಿರುವುದರಿಂದ, ಈಗಾಗಲೇ ದಿನಾಂಕ: 16.01.2002 ರಂದು ನಡೆದಿರುವ ಅಷ್ಟಮಂಗಳ ಪ್ರಶ್ನೆಯಲ್ಲಿ ಜ್ಯೋತಿಷಿಗಳು ಹೇಳಿದಂತೆ ಶ್ರೀ ಅಗಸ್ತೇಶ್ವರನ ಬಿಂಬವು ಅತ್ಯಂತ ಜೀರ್ಣವಾಗಿದ್ದು, ಇದು ಅಷ್ಟಬಂಧ ಚಲನೆಯಾಗಿ, ಆಗಾಗ್ಗೆ ಪತನಗೊಳ್ಳುವುದರಿಂದ, ಹೊಸ ಬಿಂಬವನ್ನು ಪ್ರತಿಷ್ಠಾಪಿಸುವುದು ಸೂಕ್ತವೆಂದು ಹಾಗೂ ಹೊಸ ಬಿಂಬ ಸ್ಥಾಪನೆಯ ಸಂದರ್ಭದಲ್ಲಿ ಜೀರ್ಣವಾದ ಅಗಸ್ತೇಶ್ವರ ಹಳೆ ಬಿಂಬವನ್ನು (ಶಿವಲಿಂಗವನ್ನು) ನಿಸ್ತೇಜಗೊಳಿಸಿ, ಅದರಡಿಯಲ್ಲಿ ಭೂಗತ ಮಾಡಬೇಕೆಂದು ತಿಳಿಸಿರುತ್ತಾರೆ. ಅದರಂತೆ ಸದರಿ ಶಿವಲಿಂಗವನ್ನು ಈ ಹಿಂದೆ ಹೊಸದಾಗಿ ಸ್ಥಾಪಿಸಿರುವ ಶಿವಲಿಂಗದ ಕೆಳಗಡೆ ಭೂಗತಗೊಳಿಸಲಾಗಿತ್ತು.

ಮತ್ತೊಂದು ಕಡೆ, ಇದೇ ವಿಚಾರವಾಗಿ ದಿನಾಂಕ: 21.05.2018 ರಂದು ನಡೆದ ಅಷ್ಟಮಂಗಳ ಪ್ರಶ್ನೆಯಲ್ಲಿ ಈಗಾಗಲೇ ಭೂಗತಗೊಳಿಸಿರುವ ಹಳೆಯ ಶ್ರೀ ಅಗಸ್ತೇಶ್ವರ ಬಿಂಬವನ್ನು ನಿಸ್ತೇಜಗೊಳಿಸುವಂತೆ ಹಾಗೂ ಸದರಿ ವಿಗ್ರಹವನ್ನು "ಪೂಂಪಹಾರ್" ಎಂಬ ಕಾವೇರಿ ನದಿ ಸಮುದ್ರ ಸೇರುವ ಸ್ಥಳದಲ್ಲಿ ವಿಸರ್ಜನ ಮಾಡಬೇಕೆಂದೂ ಹಾಗೂ ಅಡಿ ಭಾಗದಲ್ಲಿರುವ ಇಟ್ಟಿರುವ ಹಳೇ ಬಿಂಬ (ಶಿವಲಿಂಗ) ವು ತಂತ್ರಿಗಳಿಗೆ ವಿಘ್ನ ಉಂಟಾಗಿದೆ ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಶಿವಲಿಂಗವನ್ನು ಹೊರತೆಗೆದು ಬಂಗಾಳ ಸಮುದ್ರದಲ್ಲಿ ವಿಸರ್ಜಿಸುವ ಸಲುವಾಗಿ ದೇವಾಲಯದಲ್ಲಿಯೇ ಸುರಕ್ಷಿತವಾಗಿ ಇರಿಸಲಾಗಿದೆ.

ಮೇಲ್ಕಂಡಂತೆ ಈಗಾಗಲೇ 2002 ಹಾಗೂ 2018 ರಲ್ಲಿ ನಡೆದ ಅಷ್ಟಮಂಗಳ ಪ್ರಶ್ನೆಗಳಲ್ಲಿ ದ್ವಂದ್ವ ನಿಲುವು ಇರುವುದರಿಂದ ಈ ದ್ವಂದ್ವ ನಿಲುವುಗಳಲ್ಲಿ ಯಾವುದನ್ನು ಒಪ್ಪಬೇಕು? ಯಾವುದನ್ನು ಒಪ್ಪಬಾರದು? ಎಂಬ ಬಗ್ಗೆ ಹಾಗೂ ಸದರಿ ಪ್ರಕರಣವು ಅತ್ಯಂತ ಗಂಭೀರ ಹಾಗೂ ಬಹಳ

ಸೂಕ್ಷ್ಮತೆಯಿಂದ ಕೂಡಿದ್ದು, ಮುಂದಿನ ವಿಚಾರಣಾ ಸಮಯದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳೊಂದಿಗೆ ಮಾಹಿತಿ ನೀಡಬೇಕಾಗಿರುವುದರಿಂದ ಹಾಳಾದ / ಚೂರು ಚೂರಾದ ಲಿಂಗವನ್ನು ನಿಯಮಾನುಸಾರ ಆಗಮ ರೀತ್ಯಾ ಯಾವ ರೀತಿ ಕ್ರಮವಹಿಸಬೇಕಾಗಿದೆ ಎಂಬ ಬಗ್ಗೆ ಪ್ರಸ್ತಾಪಿಸಿ, ಸೂಕ್ತ ದಾಖಲೆಯೊಂದಿಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಮುಂದಿನ ವಿಚಾರಣ ಸಮಯದಲ್ಲಿ ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳೊಂದಿಗೆ ಮಾಹಿತಿ ನೀಡಬೇಕಾಗಿರುವುದಿಂದ, ಪ್ರಕರಣದ ಬಗ್ಗೆ ಆಗಮ ರೀತ್ಯಾ ನಿಯಮಾನುಸಾರ ಯಾವರೀತಿ ಕ್ರಮವಹಿಸಬೇಕಾಗಿದೆ ಎಂಬ ಬಗ್ಗೆ ದಯಮಾಡಿ ಮಾನ್ಯ ಆಗಮ ಪಂಡಿತರು ಸೂಕ್ತ ದಾಖಲೆಗಳೊಂದಿಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿರುತ್ತದೆ.

ಅದರಂತೆ ವಿದ್ವಾನ್ ಶ್ರೀ ಗಣಪತಿ ಎಂ. ಶಾಸ್ತ್ರಿ, (ನಿವೃತ್ತ ಹಿರಿಯ ಆಗಮ ಪಂಡಿತರು) (ಶೈವಾಗಮ) ನಂ. 125/1 5ನೇ ಮುಖ್ಯ ರಸ್ತೆ, ಅಪೆಕ್ಸ್ ಬ್ಯಾಂಕ್ ಮುಂಭಾಗ, ಚಾಮರಾಜಪೇಟೆ, ಬೆಂಗಳೂರು - 570 018 ಮತ್ತು ವಿದ್ವಾನ್ ಶ್ರೀ ಪಿ. ಚಂದ್ರಶೇಖರ್, ಶೈವಾಗಮ ಪ್ರಾಧ್ಯಾಪಕರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯ, ಆದಿ ಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ - 571 432 ಇವರನ್ನು ದೇವಾಲಯಕ್ಕೆ ನಿಯೋಜಿಸಿ ಸೂಕ್ತ ದಾಖಲೆಗಳೊಂದಿಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಸೂಚಿಸಿರುವ ಮೇರೆಗೆ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ:-

'ಈ ಅಗಸ್ತೇಶ್ವರ ದೇವಾಲಯವನ್ನು ಹಾಗೂ ಮೂಲ ಕಾವೇರಿಯ ಸ್ಥಾನವನ್ನು 2002 ರಿಂದ 2005 ರ ವರೆಗೆ ವಿಶೇಷವಾಗಿ ಅಭಿವೃದ್ಧಿಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ (2006ನೇ ಇಸವಿಯಲ್ಲಿ) ಹಳೆಯದಾಗಿರುವ ಅಗಸ್ತ್ಯ ಮಹರ್ಷಿಯಿಂದ ಪ್ರತಿಷ್ಠಾಪಿಸಲ್ಪಟ್ಟಿರುತ್ತದೆ ಎಂದು ಪ್ರತೀತಿಯಾಗಿರುವ ಆ ಅಗಸ್ತೇಶ್ವರ ಲಿಂಗವನ್ನು ದೇವಸ್ಥಾನದ ತಂತ್ರಿಗಳು ಮತ್ತು ಅಷ್ಟಮಂಗಳ ಪ್ರಶ್ನೆಯ ಆಧಾರದ ಮೇಲೆ ಲಿಂಗವನ್ನು ತೆಗೆದು ಲಿಂಗಮಾತ್ರವನ್ನು ಅಗಸ್ತ್ಯನ ಮೂಲಸ್ಥಾನದ ಕೆಳಭಾಗದಲ್ಲಿ ಭೂಸ್ತಂಭನ ಮಾಡಿ ಅದರ ಮೇಲೆ ಪುನ: ಹೊಸದಾದ ಪಾಣಿಪೀಟಸಮೇತವಾಗಿರುವ ಲಿಂಗವನ್ನು ಪ್ರತಿಷ್ಠಾಪಿಸಿರುತ್ತಾರೆ.

ಪುನಃ ಈ ದೇವಾಲಯದಲ್ಲಿ ಅನೇಕ ಜೀರ್ಣೋದ್ಧಾರಗಳನ್ನು ಮಾಡಿ 2018 ರಲ್ಲಿ ಅಷ್ಟಮಂಗಳದ ಆಧಾರದ ಮೇಲೆ ಈ ಹಿಂದೆ ಭೂಸ್ತಂಭನ ಮಾಡಿ ಲಿಂಗವನ್ನು ಅಘಾದವಾದ ಜಲಾಶಯದಲ್ಲಿ ವಿಸರ್ಜಿಸಬೇಕೆಂದು ತಿಳಿಸಿರುವ ಕಾರಣ 2005ನೇ ಇಸ್ವಿಯಲ್ಲಿ ಪ್ರತಿಷ್ಠಾಪಿಸಿರುವ ಲಿಂಗಕ್ಕೆ ಕಲಾಕರ್ಶಣೆ ಮಾಡಿ ಕೆಳಗಡೆ ಭೂಸ್ತಂಭನ ಮಾಡಿರುವ ಲಿಂಗವನ್ನೇ ಪುನಃ ತೆಗೆದು ಜಲದಲ್ಲಿ ವಿಸರ್ಜಿಸಲು ಸಿದ್ಧಗೊಳಿಸಿಕೊಂಡು ಜೀರ್ಣೋದ್ಧಾರ, ಬ್ರಹ್ಮಕಳಶೋತ್ಸವವನ್ನು ಪೂರೈಸಿ ಅಗಾಧವಾದ ಜಲಾಶಯದಲ್ಲಿ ಹಳೆಯದಾದ ಲಿಂಗವನ್ನು ನೀರಲ್ಲಿ ವಿಸರ್ಜಿಸಲು ಉದ್ಯುಕ್ತರಾದಾಗ ಶ್ರೀ ಲೋಹಿತ್ ಅರಸ್ ಎಂಬುವವರು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಪಕರಣವನ್ನು ದಾಖಲಿಸಿ ನ್ಯಾಯಾಲಯದಿಂದ ದಿನಾಂಕ: 10-09-2019ರಂದು ಯಥಾಸ್ಥಿತಿಯನ್ನು ಅದರಿಂದಾಗಿ ಹಳೆಯದಾದ ಲಿಂಗವು ಕಾಯ್ದುಕೊಳ್ಳತಕ್ಕದ್ದು ಎನ್ನುವ ಆದೇಶವನ್ನು ತಂದಿರುತ್ತಾರೆ.

ತಲಕಾವೇರಿಯ ದೇವಸ್ಥಾನದ ಸಭಾಭವನದ ಸುರಕ್ಷಿತ ಕೊಠಡಿಯಲ್ಲಿ ಕಾಯ್ದಿಡಲಾಗಿರುತ್ತದೆ. 2006ನೇ ಇಸ್ವಿಯಲ್ಲಿ ನೂತನ ಲಿಂಗ ಪ್ರತಿಷ್ಠೆ, ಹಳೆಯ ಲಿಂಗವನ್ನು ವಿಸರ್ಜಿಸುವ ಪಕ್ರಿಯೆಗೆ ಹಾಗೂ ಪುನಃ 2018ರಲ್ಲಿ ಭೂಸ್ತಂಭನ ಮಾಡಿರುವ ಲಿಂಗವನ್ನು ತೆಗೆಯುವಿಕೆಗಾಗಲೀ ಧಾರ್ಮಿಕ ದತ್ತಿ ಇಲಾಖೆಯ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಎಂದು ವಾದಿಯವರು ಆಕ್ಷೇಪಿಸಿರುತ್ತಾರೆ.

ಭೂಮಿಯಿಂದ ತೆಗೆದಿರುವ ಲಿಂಗವನ್ನು ತಾಮ್ರದ ಪೆಟ್ಟಿಗೆಯಲ್ಲಿ ಇಟ್ಟಿರುತ್ತಾರೆ. ಈ ಲಿಂಗ ಮಾತ್ರ ಪೆಟ್ಟಿಗೆಯಲ್ಲಿ ಇರುತ್ತದೆ. ಇದರ ಪಾಣಿಪೀಠವು ಕಾವೇರಿಯ ಹೆಚ್ಚಿನ ನೀರು ಸಂಗ್ರಹವಾಗುವ ಸ್ಥಳದಲ್ಲಿ ಮೇಲ್ಭಾಗದಲ್ಲಿ 3 ಭಾಗಗಳಾಗಿ ತುಂಡಾಗದೇ ಸಮವಾಗಿರುತ್ತದೆ. ಕೇವಲ ಲಿಂಗ ಮಾತ್ರ ಭಿನ್ನವಾಗಿರುತ್ತದೆ. ಹಳೆಯ ಕಾಲದಲ್ಲಿ ಲಿಂಗ ನಿರ್ಮಾಣವು ಲಿಂಗವೇ ಪ್ರತ್ಯೇಕವಾಗಿದ್ದು ಪಾಣಿಪೀಠವು ಪ್ರತ್ಯೇಕವಾಗಿರುತ್ತದೆ.

ಪಾಣಿಪೀಠವನ್ನು ಅಧಃಪದ್ಮ, ಕಂಠ, ಊರ್ಧ್ವಪದ್ಮ ಎನ್ನುವ ರೀತಿಯಾಗಿ ನಿರ್ಮಿಸಿರುತ್ತಾರೆ. ಲಿಂಗವನ್ನು ಬ್ರಹ್ಮಕಾಂತ, ವಿಷ್ಣು ಕಾಂತ, ರುದ್ರಕಾಂತ ಎನ್ನುವ ವಿಭಾಗದೊಂದಿಗೆ ಬ್ರಹ್ಮಕಾಂತವನ್ನು ಚತುರಸ್ರವಾಗಿಯೂ ವಿಷ್ಣು ಕಾಂತವನ್ನು ಅಷ್ಟಾಶ್ರವಾಗಿಯೂ, ಶಿವಕಾಂತವನ್ನು ವರ್ತುಲಾಕಾರವಾಗಿಯೂ ನಿರ್ಮಿಸಿರುತ್ತಾರೆ. ಈ ರೀತಿಯಾದ ಲಿಂಗವನ್ನು ವರ್ಧಮಾನ ಲಿಂಗ, ಶಿವಾಧಿಕ ಲಿಂಗ, ಸ್ವಸ್ತಿಕ್ ಲಿಂಗ ಎಂದು ಕರೆಯುತ್ತಾರೆ. ಈ ಲಿಂಗವನ್ನು ಪ್ರತಿಷ್ಠಾ ಕಾಲದಲ್ಲಿ

"ಆಧಾರಶಿಲೆ" ಎನ್ನುವ ಸ್ತ್ರೀಲಿಂಗದ ಶಿಲೆಯಲ್ಲಿ ಇಟ್ಟು ಅದರ ಮೇಲೆ ಪಾಣಿಪೀಠವನ್ನು ಕ್ರಮವಾಗಿ ಅಧಃ ಪದ್ಮಭಾಗ, ಕಂಠಭಾಗ ಹಾಗೂ ಊರ್ಧ್ವಪದ್ಮಭಾಗವನ್ನು ಜೋಡಿಸಿ ಅಷ್ಟಬಂಧ ಲೇಪನವನ್ನು ಮಾಡಿ ಧೃಡಗೊಳಿಸಿರುತ್ತಾರೆ. ಇದು ಆರ್ಶಯವಾಗಿ ಲಿಂಗ ಪ್ರತಿಷ್ಠಾ ವಿಧಾನವಾಗಿ ಬಂದಿರುತ್ತದೆ.

ಈ ಭೂಸ್ತಂಭನ ಮಾಡಿರುವ ಅಗಸ್ತ್ಯ ಲಿಂಗವೂ ಕೂಡ ಅದೇ ರೀತಿಯಾಗಿ ಪ್ರತಿಷ್ಠಾಪನೆ ಮಾಡಿರುತ್ತಾರೆ. ಶಾಸ್ತ್ರೀಯವಾಗಿ ಇರಬೇಕಾದ ಲಿಂಗದ ಚಿತ್ರವನ್ನು ಕಾಶ್ಯಪ ಶಿಲ್ಪ ಶಾಸ್ತ್ರದ (ಗ್ರಂಥದ ಆಧಾರದ ಚಿತ್ರದಲ್ಲಿ) ಅ ಹಾಗೂ ಆ ಇದನ್ನು ತಿಳಿಯಬಹುದಾಗಿರುತ್ತದೆ. 2006ನೇ ಇಸ್ವಿಯಲ್ಲಿ ನೂತನವಾಗಿ ಪ್ರತಿಷ್ಠಾಪಿಸಿದ ಶಿವಲಿಂಗವು ಈ ರೀತಿಯಾಗಿ ಇರುವುದಿಲ್ಲ. ಪಾಣಿಪೀಠದ ಮೇಲೆ ಲಿಂಗದ ರುದ್ರಾಂಗ ಮಾತ್ರ ಪ್ರತಿಷ್ಠಾಪಿಸಿರುತ್ತಾರೆ.

ಈ ಅಗಸ್ತೇಶ್ವರ ಸ್ಥಾನದ ಲಿಂಗವನ್ನು ಸ್ಥಳೀಯ ಜನರ ಅಭಿಪ್ರಾಯದ ಪ್ರಕಾರ ಅಗಸ್ತನೇ ಪ್ರತಿಷ್ಠಾಪಿಸಿದ್ದಾನ ಎಂದು ಪ್ರತೀತಿಯಾಗಿರುತ್ತದೆ. ಆದ್ದರಿಂದ ಈ ಸ್ಥಾನದ ಲಿಂಗವು ಋಷಿ ಪ್ರತಿಷ್ಠೆ ಎಂಬುವ ವರ್ಗಕ್ಕೆ ಸೇರುತ್ತದೆ. ಶೈವಾಗಮ ಶಾಸ್ತ್ರದ ಗ್ರಂಥವಾದ "ಸಿದ್ಧಾಂತ ಶೇಖರ" ಗ್ರಂಥದ ಜೀರ್ಣೋದ್ಧಾರ ಪ್ರಕರಣದಲ್ಲಿ 38, 39ನೇ ಶ್ಲೋಕದಲ್ಲಿ "ಸ್ವಾಯಂಭುವೇಚವೇಚ, ಬಾಣೇಚ ಮಣಿಲಿಂಗಕೇ, ಋಷಭ ಸುರೈಸಿದ್ಧ ತತ್ವ ವಿಧಿಃಪ್ರತಿಷ್ಠಿತೇ ಲಿಂಗೇ ಜೀರ್ಣಾದಿ ದುಷ್ಟತು ನೋದ್ಧಾರಂ ತತ್ರ ಕಾರಯೇತ್ ॥ ಹಾಗೂ ಅದೇ ಗ್ರಂಥದ ಜೀರ್ಣೋದ್ಧಾರದ ಮತ್ತೊಂದು ವಿಭಾಗದಲ್ಲಿ 8 ರಿಂದ 11ನೇ ಶ್ಲೋಕದ ವರೆಗೂ ಹಾಗೂ 17ನೇ ಶ್ಲೋಕದಲ್ಲಿ ಋಷಿಗಳಿಂದ ಸ್ವಯಂಭುವಾಗಿ, ದೇವತೆಗಳಿಂದ ಪ್ರತಿಷ್ಠೆಯಾಗಿರುವ ಲಿಂಗವೂ ಜೀರ್ಣವಾಗಿದ್ದರೂ ಕೂಡ (ಭಿನ್ನವಾಗಿದ್ದರೂ ಕೂಡ) ಬದಲಾಯಿಸಕೂಡದು ಎನ್ನುವುದಾಗಿಯೂ "ಶತೇನ ಸ್ಥಾಪಿತಂ ಲಿಂಗ ಸಹಸ್ರೇಣ ನ ಚಾಲಯೇತ್" ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ ಈ ಸನ್ನಿಧಿಯು ಋಷಿ ಪ್ರತಿಷ್ಠೆಯಾಗಿರುವ ಕಾರಣ ಆಗಮಶಾಸ್ತ್ರದ ಪ್ರಕಾರ ಭಿನ್ನವಾಗಿದ್ದರೂ ಕೂಡ ತೆಗೆಯಬಾರದಾಗಿತ್ತು. ಆದರೆ, ಈಗಾಗಲೇ ತೆಗೆದು ಬೇರೊಂದು ಲಿಂಗವನ್ನು ಸ್ಥಾಪಿಸಿರುತ್ತಾರೆ. ಆದ ಕಾರಣ ಹಳೆಯದಾದಂತ ಭೂಸ್ತಂಭನ ಮಾಡಿ ತೆಗೆದಿರುವ ಭಿನ್ನವಾದ ಲಿಂಗವನ್ನು ಕಾವೇರಿ ಉಗಮಸ್ಥಾನದ ತೀರ್ಥದ ಹೆಚ್ಚುವರಿಯಾಗಿ ಶೇಖರಿಸಲ್ಪಡುವ ಸ್ಥಳದಲ್ಲಿ (ಪುರುಷರು ವಸ್ತ್ರವನ್ನು ಬದಲಾಯಿಸುವ ಸ್ಥಳದ ಸಮೀಪ) ಆ ನೀರಿನ ತಟಾಕದಲ್ಲಿ ಹಳೆಯ ಲಿಂಗದ ಪಾಣಿಪೀಠವನ್ನಿಟ್ಟು ಅದರ ಮೇಲೆ ಈ ಲಿಂಗದ ಶಿರೋಭಾರವನ್ನು ಶಿಲಾಟಂಕ ಮಾಡಿ ಅಲ್ಲಿ ಸ್ಥಾಪಿಸಬಹುದಾಗಿರುತ್ತದೆ. "ಸಿದ್ಧಾಂತ ಶೇಖರ" ಎನ್ನುವ ಗ್ರಂಥದ "ಪಂಚಲಿಂಗ ವಿಧಿಕ್ರಮ" ಎನ್ನುವ ಪ್ರಕರಣದಲ್ಲಿ "ಪ್ರಾಸಾದ ಪಶ್ಚಿಮ ಪೂರ್ವ ಏಕಲಿಂಗ ಸ್ಥಿತೇಯದಿ | ಪುನಃ ಲಿಂಗಾನಿ ಸಂಗ್ರಹ ತದಂಗಂಚ ಪ್ರತಿಷ್ಠಿತಮ್ | ಅಪ್ಸು ಸಮಾಹುತೋ ವಾಪಿ ತಲ್ಲಿಂಗಮ್ ವರ್ಜಯೇದ್ಯದಿ / ಕತ್ರ್ಣಾಮ್ ಅನ್ಯಥಾಚೈವ ರಾಜಾಷ್ಟ್ರಮ್ ಚಹೋದ | ತಸ್ಮಾತ್ ಸರ್ವ ಪ್ರಯತ್ನನ ಪಾರ್ಶ್ವತು ರತು ಪ್ರತಿಷ್ಠಿತಮ್ | ಸರ್ವಾಭೀಷ್ಟಂ ಪಲಂಚೈವ ಭೋಗ ಮೋಕ್ಷ ಫಲಪ್ರದಮ್॥ ಎಂದು ಹೇಳಿರುವ ಕಾರಣ ಈ ಭಿನ್ನವಾದ ಲಿಂಗವನ್ನು ಶಿಲಾಟಂಕ ಮಾಡಿ ಮೇಲೆ ನಿರ್ದೇಶಿಸಿದ ಸ್ಥಳದಲ್ಲಿ ಇಡಬಹುದಾಗಿರುತ್ತದೆ.

ಇದರಿಂದಾಗಿ ಋಷಿಪ್ರತಿಷ್ಠ್ಯವಾದ ಲಿಂಗದ ಸ್ಥಾನವನ್ನು ಉಳಿಸಿಕೊಂಡಂತೆ ಆಗುತ್ತದೆ ಹಾಗೂ ಭಕ್ತರ ಮನಸಿಗೂ ಕೂಡ ಸಂತೋಷವಾಗುತ್ತದೆ ಎಂಬ ಅಭಿಪ್ರಾಯಕ್ಕೆ ನಾವಿಬ್ಬರೂ ಶಾಸ್ತ್ರದ ಪರ್ಯಾಲೋಚನೆಯ ಮೇರೆಗೆ ಮೇಲಿನ ಅಭಿಪ್ರಾಯವನ್ನು ನೀಡಲಾಗಿರುತ್ತದೆ.'

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 15763/2019ರ ಪ್ರಕರಣದಲ್ಲಿ ದಿನಾಂಕ:30-03-2020 ನಂತರ ವಿಚಾರಣಾ ದಿನಾಂಕವು ನಿಗಧಿಯಾಗಿರುವುದಿಲ್ಲ. ಮುಂದಿನ ಹಂತವನ್ನು ನಿರೀಕ್ಷಿಸಲಾಗುತ್ತಿದೆ ಮತ್ತು ಕಾರ್ಯನಿರ್ವಹಣಾಧಿಕಾರಿಗಳು, ಶ್ರೀ ಭಗಂಡೇಶ್ವರ ದೇವಾಲಯ ರವರ ಪತ್ರ ಸಂಖ್ಯೆ: ಎಸ್. ಬಿ. ಟಿ. ಸಿಆರ್/12/2024-25, ದಿನಾಂಕ:12-06-2024ರಲ್ಲಿ ತಡೆಯಾಜ್ಞೆ ತೆರವುಗೊಳಿಸಲು ಕೋರಿರುತ್ತಾರೆ. ಅದರಂತೆ ತಡೆಯಾಜ್ಞೆಯನ್ನು ತೆರವುಗೊಳಿಸಲು ಪ್ರಕರಣವನ್ನು ಇತ್ಯರ್ಥ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರಿ ವಕೀಲರನ್ನು ಕೋರಲಾಗಿದೆ.

ಸಂಖ್ಯೆ: ಕಂಇ 98 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.